# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

**ದಿನಾಂಕ: 22.09.2021 ರಂದು ಬೆಳಿಗ್ಗೆ: 11:00 ಗಂಟೆಗೆ ಸರ್.ಎಂ ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇಲ್ಲಿ ನಡೆದ 2020–21ನೇ ಸಾಲಿನ ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳು**

**ಸಿಂಡಿಕೇಟ್ ಸಭೆಗೆ ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ವೈ.ಎಸ್. ಸಿದ್ದೇಗೌಡ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಪರಮಶಿವಮೂರ್ತಿ ಡಿ.ವಿ<br>ಡೀನರು, ಕಲಾ ನಿಕಾಯ | ಸದಸ್ಯರು |
| 3. | ಶ್ರೀ ಶ್ರೀನಿವಾಸ ಆರ್.ಕೆ.<br>ತಂದೆ: ಲೇಟ್ ಕಲ್ಲಪ್ಪ, ರಂಗಾಪುರ, ಕೊಟ್ಟ ಅಂಚೆ, ಶಿರಾ ತಾಲ್ಲೂಕು, ತುಮಕೂರು ಜಿ.–572137. | ಸದಸ್ಯರು |
| 4. | ಶ್ರೀಮತಿ ಲತಾ ಬಿ.ಎಸ್<br>ಪ್ರಾಂಶುಪಾಲರು, ಶ್ರೀ ಸಿದ್ದಾರ್ಥ ಶಿಕ್ಷಣ ಮಹಾವಿದ್ಯಾಲಯ, ತುಮಕೂರು. | ಸದಸ್ಯರು |
| 5. | ಪ್ರೊ. ಹೆಚ್.ಎಸ್. ಶಿವಯೋಗಿ,<br>ಪ್ರಾಂಶುಪಾಲರು, ನವೋದಯ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ | ಸದಸ್ಯರು |
| 6. | ಡಾ. ಟಿ. ವೆಂಕಟಾಚಲಯ್ಯ<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ (ಸ್ವಾಯತ್ತ)<br>ತುಮಕೂರು ಜಿಲ್ಲೆ. | ಸದಸ್ಯರು |
| 7. | ಡಾ. ಕೆ ಸಿ ಜಯಸ್ವಾಮಿ<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು<br>ಬಿ.ಹೆಚ್ ರಸ್ತೆ, ತುಮಕೂರು | ಸದಸ್ಯರು |
| 8. | ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್.<br>'ನಂಜುಂಡೇಶ್ವರ ನಿಲಯ' ಹೆಚ್.ಪಿ.ಎಸ್. ರಸ್ತೆ, ಶಿವಮೂಕಾಂಬಿಕ ನಗರ, ತುಮಕೂರು–572102. | ಸದಸ್ಯರು |
| 9. | ಶ್ರೀ ಪ್ರಸನ್ನಕುಮಾರ್<br>ನಂ. 126, ಅಮರ್ ಟವರ್ಸ್, 1ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು–560009. | ಸದಸ್ಯರು |
| 10. | ಶ್ರೀ ರಾಜು<br>ನಂ.734/2, ಗೋವಿನಪುರ ರಸ್ತೆ, ಕೆ.ಆರ್. ಬಡಾವಣೆ, 8ನೇ ಅಡ್ಡರಸ್ತೆ, ಚರ್ಚ್ ಕಾಂಪೌಂಡ್ ಪಕ್ಕ,<br>ತಿಪಟೂರು–572201. ತುಮಕೂರು ಜಿಲ್ಲೆ. | ಸದಸ್ಯರು |
| 11. | ಶ್ರೀ ಟಿ.ಡಿ. ವಿನಯ್,<br>'ನೇಮಿ ನಿವಾಸ' 5ನೇ ಅಡ್ಡರಸ್ತೆ, ಗೋಕಾಕ ರಸ್ತೆ, ಸರಸ್ವತಿಪುರಂ, ದೇವರಾಜ ಅರಸ್ ರಸ್ತೆ,<br>ತುಮಕೂರು–572105. | ಸದಸ್ಯರು |
| 12. | ಪ್ರೊ. ಎಲ್.ಪಿ. ರಾಜು<br>ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸದಸ್ಯರು |
| 13. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 14. | ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |
| 15. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |

## ಆನ್ ಲೈನ್ ಮುಖಾಂತರ ಸಭೆಗೆ ಹಾಜರಾದ ಸದಸ್ಯರುಗಳು

| | | |
|---|---|---|
| 2 | ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ<br>ನಂ. 472, 'ಶ್ರೀ ನಿರ್ಮಲ ನಿಲಯ', 2ನೇ ಸಿ ಮುಖ್ಯರಸ್ತೆ, 11ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು-560072. | ಸದಸ್ಯರು |
| 3 | ಶ್ರೀಮತಿ ಎಂ.ಎಸ್. ಭವ್ಯ,<br>ವಿಲ್ಲಾ ನಂ.12, ಕೃಷ್ಣ ನಾರ್ಥ್‌ವುಡ್ಸ್, ಚೊಕ್ಕಣ ಹಳ್ಳಿ ವಿಲೇಜ್, ಜಕ್ಕೂರು ಪೋಸ್ಟ್, ಬೆಂಗಳೂರು-560064. | ಸದಸ್ಯರು |

## ಹಾಜರಾಗದ ಸದಸ್ಯರು

| | | |
|---|---|---|
| 1 | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ರವರು ಅಥವಾ ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2 | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5 | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 6 | ಶ್ರೀಮತಿ ಐಶ್ವರ್ಯ ಸುರೇಶ್,<br>ನಂಬರ್ 220, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಎ.ಇ.ಸಿ.ಎಸ್. ಬಡಾವಣೆ, ಸಂಜಯ್‌ನಗರ, ಬೆಂಗಳೂರು-560094. | ಸದಸ್ಯರು |

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ: 22.09.2021 ಬುಧವಾರ ಬೆಳಗ್ಗೆ 11:00 ಕ್ಕೆ ನಡೆದ 2020-21ನೇ ಸಾಲಿನ ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆಗೆ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಮಾನ್ಯ ಕುಲಸಚಿವರು ಕಾರ್ಯಸೂಚಿಗಳ ಮಂಡಿಸಿ, ಈ ಬಗ್ಗೆ ಚರ್ಚಿಸಿ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರ.ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|

ದಿನಾಂಕ: 30.06.2021 ರಂದು ನಡೆದ ಆರನೇ ಸಾಮಾನ್ಯ ಸಿಂಡಿಕೇಟ್ ಮತ್ತು ದಿನಾಂಕ: 06.07.2021 ರಂದು ನಡೆದ ಎರಡನೇ ವಿಶೇಷ ಸಿಂಡಿಕೇಟ್ ಸಭೆಗಳ ನಡಾವಳಿಗಳನ್ನು ದೃಢೀಕರಿಸಲಾಯಿತು.

- ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಟಿ.ಡಿ. ವಿನಯ್ ರವರು ರಾಷ್ಟ್ರೀಯ ಶಿಕ್ಷಣ ನೀತಿಯ ವಿನಿಯಮದಲ್ಲಿ The Medium of Instructions ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಮಾಧ್ಯಮದಲ್ಲಿ ಇರುವಂತೆ ವಿನಿಯಮದಲ್ಲಿ ಅಳವಡಿಸಲು ಸಲಹೆ ನೀಡಿದರು. ಇದಕ್ಕೆ ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್. ರವರು ಹಾಗೂ ಇತರೆ ಸದಸ್ಯರು ಒಪ್ಪಿಗೆಯನ್ನು ಸೂಚಿಸಿದರು.
- ವಿಶ್ವವಿದ್ಯಾನಿಲಯದಲ್ಲಿ ವಿವಿಧ ಯೋಜನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಸಿಬ್ಬಂದಿಗಳ ವೇತನ ಪರಿಷ್ಕರಣೆಯ ಕುರಿತು ಮುಂದಿನ ದಿನಾಂಕ 29.09.2021 ರಂದು ಸಭೆ ನಡೆಸಿ, ಮುಂದಿನ ಕ್ರಮ ಕೈಗೊಳ್ಳುವುದಾಗಿ ಸಿಂಡಿಕೇಟ್ ಸಭೆಗೆ ಮಾನ್ಯ ಕುಲಪತಿಯವರು ತಿಳಿಸಿದರು.
- ತುಮಕೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಳಿಗೆಗಳನ್ನು ನಿರ್ಮಾನ ಮಾಡಿ, TUMUL ಮುಖಾಂತರ ಹಾಲಿನ ಪದಾರ್ಥಗಳ ಜೊತೆಗೆ ಸ್ವದೇಶಿ ವಸ್ತುಗಳನ್ನು ಮಾರಾಟ ಮಾಡಲು ಬಾಡಿಗೆಗೆ ನೀಡುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆದಾಯ ಬರುವುದಾಗಿ ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್. ರವರು ಸಭೆಗೆ ತಿಳಿಸಿದರು ಹಾಗೂ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸಾರಾಂಗವನ್ನು ಸ್ಥಾಪಿಸಿ ಇದರ ಮುಖಾಂತರ ಪುಸ್ತಕಗಳ ಮಾರಾಟ ಮಾಡಲು ಅನುವು ಮಾಡಿಕೊಡಬೇಕಾಗಿ ಪ್ರೊ. ಪರಮಶಿವಮೂರ್ತಿ ಡಿ.ವಿ. ರವರು ಸಭೆಗೆ ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ, ಇಂಜಿನಿಯರಿಂಗ್ ವಿಭಾಗದಿಂದ ಕ್ರಮ ಕೈಗೊಳ್ಳಲು ಸೂಚಿಸಲು ತಿಳಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿತು.

- ಮುಂಬರುವ ಶೈಕ್ಷಣಿಕ ಸಾಲಿನ ಪಿಹೆಚ್.ಡಿ. ಪ್ರವೇಶಾತಿ ಪ್ರಕ್ರಿಯೆಯನ್ನು ಈಗಿನಿಂದಲೇ ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಶ್ರೀ ಶ್ರೀನಿವಾಸ್ ಆರ್.ಕೆ. ರವರು ಸಭೆಗೆ ತಿಳಿಸಿದರು.
- ಪ್ರೊ. ಎಲ್.ಪಿ. ರಾಜು, ಇವರು ಹಳೆಯ ನಿವೃತ್ತಿ ಪಿಂಚಣಿ ಯೋಜನೆಯ (Old Pension Scheme) ಸಂಬಂಧ ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲು ಸಭೆಯಲ್ಲಿ ತಿಳಿಸಿದರು.

**ಶೈಕ್ಷಣಿಕ ವಿಭಾಗ**

| | | | |
|---|---|---|---|
| 1 | 2020-21.ಸಾ.ಸಿಂ.07 ಶೈ.ವಿ.-01 | ಬಿ.ವೋಕ್ ಕೋರ್ಸ್‌ನ ತಿದ್ದುಪಡಿ ವಿನಿಯಮದ ಕುರಿತು. | ಬಿ.ವೋಕ್ ಕೋರ್ಸಿನ ತಿದ್ದುಪಡಿ ವಿನಿಯಮದ ಕುರಿತು ಚರ್ಚಿಸಿದ ಸಭೆಯು ಸರ್ಕಾರದ ಪತ್ರ ಸಂಖ್ಯೆ ಇಡಿ 22 ಯುಟಿಟಿ 2020 ದಿನಾಂಕ 15.06.2021ರ ಆದೇಶದಂತೆ ಬಿ.ವೋಕ್ ಅಧ್ಯಯನ ಮಂಡಳಿಯು ಯು.ಜಿ.ಸಿ ಮಾರ್ಗಸೂಚಿಗಳಿಗೆ ಅನುಗುಣವಾಗಿ ಪರಿಷ್ಕರಿಸಿ ಸಲ್ಲಿಸಿರುವ ವಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ, ಸದರಿ ವಿನಿಯಮದಲ್ಲಿ The Medium of Instructions and Examinations in English/ Kannada ಎಂದು ಮಾರ್ಪಾಡು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮತಿಸಿತು. |
| 2 | 2020-21.ಸಾ.ಸಿಂ.07 ಶೈ.ವಿ.-02 | ನಾಲ್ಕು ವರ್ಷದ ಇಂಟಿಗ್ರೇಟೆಡ್ ಬಿ.ಇಡಿ., ಪದವಿಯ ವಿನಿಯಮವನ್ನು ಅನುಮೋದಿಸುವ ಕುರಿತು. | ನಾಲ್ಕು ವರ್ಷದ ಇಂಟಿಗ್ರೇಟೆಡ್ ಬಿ.ಇಡಿ ಪದವಿಯ ವಿನಿಯಮದ ಕುರಿತು, ಸರ್ಕಾರದ ಪತ್ರ ಸಂಖ್ಯೆ ಇ-ಕಚೇರಿ ಸಂ: ಇಡಿ 06 ಯುಟಿಟಿ 2021 ದಿನಾಂಕ 15.03.2021ರಲ್ಲಿ ತಿಳಿಸಿರುವ ಮಾರ್ಪಡುಗಳನ್ನು ಅನುಷ್ಠಾನ ಮಂಡಳಿಯು ಪರಿಷ್ಕರಿಸಿ ಸಲ್ಲಿಸಿರುವ ವಿನಿಯಮದ ಕುರಿತು ಚರ್ಚಿಸಿ ಪರಿಶೀಲಿಸಿದ ವಿದ್ಯಾವಿಷಯಕ ಪರಿಷತ್ ಸಭೆಯು ನಿರ್ಣಯಿಸಿ ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮತಿಸಿತು. |

| | | | |
|---|---|---|---|
| 3 | 2020-21.ಸಾ.ಸಿಂ.07<br>ಶೈ.ವಿ.-03 | 2021-22ನೇ ಶೈಕ್ಷಣಿಕ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ (NEP) ಯನ್ನು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಅನುಷ್ಠಾನಗೊಳಿಸುವ ಕುರಿತು ವಿನಿಯಮವನ್ನು ರಚಿಸಿರುವ ಕುರಿತು. | 2021-22ನೇ ಶೈಕ್ಷಣಿಕ ಸಾಲಿನಿಂದ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಂಡಿರುವ ಸಂಬಂಧ, ವಿನಿಯಮದ ಕುರಿತು ಚರ್ಚಿಸಿ ಪರಿಶೀಲಿಸಿದ ಸಭೆಯು ವಿದ್ಯಾವಿಷಯಕ ಪರಿಷತ್ ನಿರ್ಣಯಿಸಿ ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿತು ಹಾಗೂ ಸದರಿ ವಿನಿಯಮದಲ್ಲಿ The Medium of Instructions in English/ Kannada ಎಂದು ಮಾರ್ಪಾಡು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 4 | 2020-21.ಸಾ.ಸಿಂ.07<br>ಶೈ.ವಿ.-04 | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ. | ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಗಳನ್ನು ರಚಿಸಿ ಅಧಿಸೂಚಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| | | **ಪರೀಕ್ಷಾ ವಿಭಾಗ** | |
| 5 | 2020-21.ಸಾ.ಸಿಂ.07<br>ಪ.ವಿ.-01 | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ, ಕರಾರು ಒಪ್ಪಂದ ಮಾಡಿಕೊಂಡಿದ್ದು, ಸ್ಥಿರೀಕರಣ ಕೋರಿ. | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ, ಹಾಲಿ ಅಸ್ತಿತ್ವದಲ್ಲಿರುವ ನಂಬಿಗಸ್ಥ ಸಂಸ್ಥೆಗೆ ಪ್ರಸ್ತುತ ಇರುವ ದರದಲ್ಲಿಯೇ ದಿನಾಂಕ 24.06.2021 ರಿಂದ 23.06.2022 ವರೆಗೆ ಒಂದು ವರ್ಷದ ಅವಧಿಗೆ ದರ ಕರಾರು ಒಪ್ಪಂದ ಮಾಡಿಕೊಂಡಿರುವ ವಿಶ್ವವಿದ್ಯಾನಿಲಯ ಕ್ರಮವನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| 6 | 2020-21.ಸಾ.ಸಿಂ.07<br>ಪ.ವಿ.-02 | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣದ ವೆಚ್ಚವನ್ನು ಪಾವತಿಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು 2021 ರ ಮಾರ್ಚ್/ ಏಪ್ರಿಲ್ ಮತ್ತು ಮೇ ನಲ್ಲಿ ನಡೆದ ಸ್ನಾತಕ/ ಸ್ನಾತಕ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣದ ಸಂಬಂಧ ದರ ಕರಾರು ಒಪ್ಪಂದ ಮಾಡಿಕೊಂಡಿರುವ ಸಂಸ್ಥೆಗೆ |

| | | | |
|---|---|---|---|
| | | | ರೂ.22,16,593.00 (ಇಪ್ಪತ್ತೆರಡು ಲಕ್ಷದ ಹದಿನಾರು ಸಾವಿರದ ಐದುನೂರ ತೊಂಬತ್ತ್ಮೂರು ರೂಪಾಯಿಗಳು ಮಾತ್ರ) ಗಳನ್ನು ಪಾವತಿಲು ಸಭೆಯು ನಿರ್ಣಯಿಸಿತು. |
| | | **ಸಿಬ್ಬಂದಿ ವಿಭಾಗ** | |
| 7 | 2020-21.ಸಾ.ಸಿಂ.07 ಸಿ.ವಿ.01 | ಸಹಾಯಕ ಗ್ರಂಥಪಾಲಕರಿಗೆ ಯು.ಜಿ.ಸಿ.-ಸಿ.ಎ.ಎಸ್ ಅಡಿಯಲ್ಲಿ I Stage II Stage with AGP 6000 to 7000 (Academic Level 10 ರಿಂದ Academic Level 11) ಕ್ಕೆ ಪದೋನ್ನತಿ ನೀಡುವ ಕುರಿತು. | ಸಹಾಯಕ ಪ್ರಾಧ್ಯಾಪಕರುಗಳಿಗೆ ಯು.ಜಿ.ಸಿ-ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಸಂಬಂಧ ಸದರಿಯವರು ಪರೀಕ್ಷಾರ್ಥ ಸೇವಾವಧಿ (Probationary period) ಘೋಷಣೆ ದಿನಾಂಕಕ್ಕೆ ಅನ್ವಯವಾಗುವಂತೆ, ಈ ಹಿಂದೆ ಅನುಸರಿಸಿರುವ ಕ್ರಮದಂತೆ ಹಾಗೂ ಸರ್ಕಾರದ ಆದೇಶದಂತೆ ಅಗತ್ಯ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| 8 | 2020-21.ಸಾ.ಸಿಂ.07 ಸಿ.ವಿ.02 | ಡಾ. ಪೂರ್ಣಿಮಾ ಡಿ., ಸಹಾಯಕ ಪ್ರಾಧ್ಯಾಪಕರು ಇವರು ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆಯಡಿಯಲ್ಲಿ ವರ್ಗಾವಣೆ ಕೋರಿ ಮನವಿ ಸಲ್ಲಿಸಿರುವ ಕುರಿತು. | ಡಾ. ಪೂರ್ಣಿಮಾ ಡಿ., ಸಹಾಯಕ ಪ್ರಾಧ್ಯಾಪಕರು ಇವರು ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ ಕೋರಿರುವ ಮನವಿಯ ಕುರಿತು ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಈ ಹಿಂದೆ ಡಾ. ಗಿರೀಶ್ ಕೆ.ಎಸ್. ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ವಿಭಾಗ ಇವರಿಗೆ ನಿರಾಕ್ಷೇಪಣಾ ಪತ್ರ ನೀಡದಿರುವ ಹಿನ್ನಲೆಯಲ್ಲಿ ಡಾ. ಪೂರ್ಣಿಮಾ ಇವರಿಗೂ ಸಹ ನಿರಾಕ್ಷೇಪಣಾ ಪತ್ರ ನೀಡದಿರಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| 9 | 2020-21.ಸಾ.ಸಿಂ.07 ಸಿ.ವಿ.03 | ಶ್ರೀ ಬಸವರಾಜ್ ಪಿ.ಎಸ್., ಕಿರಿಯ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ ಇವರ ಪದೋನ್ನತಿಯ್ಲ ಸಂಬಂಧ ಸರ್ಕಾರದಿಂದ ಸ್ವೀಕೃತಿಗೊಂಡಿರುವ ಪತ್ರದ ಕುರಿತು. | ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಶ್ರೀ ಬಸವರಾಜ್ ಪಿ.ಎಸ್. ಇವರ ಪದೋನ್ನತಿಯ ಕುರಿತು ಸದರಿಯವರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವುದರಿಂದ ಈ ಕುರಿತು ನ್ಯಾಯಾಲಯವು ನೀಡುವ ಆದೇಶದಂತೆ ಕ್ರಮ ಕೈಗೊಳ್ಳಲು ಶ್ರೀ ಪ್ರಸನ್ನಕುಮಾರ್ ರವರು ಸಭೆಗೆ ತಿಳಿಸಿದರು.<br>ಮುಂದುವರೆದು, ಸದರಿ ಪ್ರಕರಣದ ಕುರಿತು, ಕಾನೂನು ಸಲಹೆ ಪಡೆದು ಮುಂಬರುವ ಸಿಂಡಿಕೇಟ್‌ಗೆ ಕಾರ್ಯಸೂಚಿಯನ್ನು ಮಂಡಿಸಲು ಸಭೆಯು ತೀರ್ಮಾನಿಸಿತು. |

| | | | |
|---|---|---|---|
| 10 | 2020-21.ಸಾ.ಸಿಂ.07 ಸಿ.ವಿ.04 | ಶ್ರೀಮತಿ ವಿಜೇತ ವಿ.ಬಿ., ಗ್ರಂಥಾಲಯ ಸಹಾಯಕರು ಗ್ರೇಡ್-2, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ನಿಯೋಜನೆ ಮೇರೆಗೆ ಬಿಡುಗಡೆಗೊಳಿಸಿರುವ ಕುರಿತು. | ಶ್ರೀಮತಿ ವಿಜೇತ ವಿ.ಬಿ., ಇವರನ್ನು ಸರ್ಕಾರದ ಆದೇಶದಂತೆ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಎರಡು ವರ್ಷಗಳ ಅವಧಿಗೆ ನಿಯೋಜನೆ ಮೇರೆಗೆ ದಿನಾಂಕ 07.08.2021ರಂದು ಅಪರಾಹ್ನ ಬಿಡುಗಡೆಗೊಳಿಸಿ ಆದೇಶೀಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| | | **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | |
| 11 | 2020-21.ಸಾ.ಸಿಂ.07 ಸಾ&ಅ.01 | ಪ್ರವೀಣ್ ಕುಮಾರ್ ಟಿ., ಐ.ಟಿ. ಕನ್ಸಲ್‌ಟೆಂಟ್ ಇವರ ಸೇವೆಯನ್ನು ಮುಂದುವರೆಸುವ ಕುರಿತು. | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಶ್ರೀ ಪ್ರವೀಣ್ ಕುಮಾರ್ ಟಿ, ಕಂಪ್ಯೂಟರ್ ಆಪರೇಟರ್ ಇವರನ್ನು ಪ್ರಸ್ತುತ ಇರುವ ವೇತನದಡಿಯಲ್ಲಿಯೇ ದಿನಾಂಕ 12.08.2021ರಿಂದ ಅನ್ವಯವಾಗುವಂತೆ ಮುಂದಿನ ಹನ್ನೊಂದು ತಿಂಗಳಿಗೆ ಮುಂದುವರೆಸಲು ಸಭೆಯು ತೀರ್ಮಾನಿಸಿತು. |
| 12 | 2020-21.ಸಾ.ಸಿಂ.07 ಸಾ&ಅ.02 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಹಿಂದುಳಿದ ವರ್ಗಗಳ ಮಹಿಳಾ ವಸತಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ Equity Initiative under RUSA-2.0 Project ಅಡಿಯಲ್ಲಿ ಮಂಜೂರಾಗಿರುವ ರೂ. 2.50 ಕೋಟಿಗಳ ಅನುದಾನದಲ್ಲಿ ಕಟ್ಟಡವನ್ನು ಬಿದರಕಟ್ಟೆ ಕ್ಯಾಂಪಸ್‌ನಲ್ಲಿ ನಿರ್ಮಾಣ ಮಾಡುವ ಕುರಿತು. | ಈ ವಿಷಯದ ಕುರಿತು, ದಿನಾಂಕ 30.06.2021 ರಂದು ಕೈಗೊಂಡಿದ್ದ ನಿರ್ಣಯವನ್ನು ಮತ್ತೊಮ್ಮೆ ದಿನಾಂಕ 22.09.2021 ರಂದು ನಡೆದ ಸಿಂಡಿಕೇಟ್‌ಗೆ ಮತ್ತೊಮ್ಮೆ ಮಂಡಿಸಿ, ಈ ಕುರಿತು, ಮಾನ್ಯ ಕುಲಪತಿಗಳು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಹಿಂದುಳಿದ ವರ್ಗಗಳ ಮಹಿಳಾ ವಸತಿ ನಿಲಯ ಕಟ್ಟಡವನ್ನು ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ನಿರ್ಮಿಸುವುದು ಸೂಕ್ತವೆಂದು ತಮ್ಮ ಅಭಿಪ್ರಾಯವನ್ನು ಸಿಂಡಿಕೇಟ್ ಸಭೆಗೆ ಮತ್ತೊಮ್ಮೆ ತಿಳಿಸಿದರು. ಇದಕ್ಕೆ, ಸದಸ್ಯ ಕಾರ್ಯದರ್ಶಿ, ಕುಲಸಚಿವರು (ಪರಿಕ್ಷಾಂಗ) ಹಾಗೂ ಹಣಕಾಸು ಅಧಿಕಾರಿಗಳು ಒಪ್ಪಿಗೆಯನ್ನು ಸೂಚಿಸಿದರು.<br>ಆದರೆ, ಇದಕ್ಕೆ ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಶ್ರೀನಿವಾಸ್ ಆರ್.ಕೆ., ಶ್ರೀ ಸುನಿಲ್‌ಪ್ರಸಾದ್, ಟಿ.ಎಸ್., ಶ್ರೀ ವಿನಯ್ ಟಿ.ಡಿ., ಶ್ರೀ ಪ್ರಸನ್ನಕುಮಾರ್, ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ, ಹಾಗೂ ಇನ್ನುಳಿದಂತಹ ಸದಸ್ಯರುಗಳು ತುಮಕೂರು ನಗರದಲ್ಲಿಯೇ ನಿರ್ಮಾಣ ಮಾಡುವಂತೆ |

| | | | |
|---|---|---|---|
| | | | ಸಭೆಗೆ ಒತ್ತಾಯಿಸಿದರು. ಆದರೂ ಸಹ ಮಾನ್ಯ ಕುಲಪತಿಗಳು ಇದಕ್ಕೆ ಒಪ್ಪಿಗೆಯನ್ನು ಸೂಚಿಸಿರುವುದಿಲ್ಲ.<br>ಮುಂದುವರೆದು, ರೂಸಾ ಅನುದಾನದ ಮೊತ್ತವನ್ನು ವ್ಯರ್ಥವಾಗದಂತೆ ಹಾಗೂ ವಿಳಂಬವಾಗದಂತೆ ಹಣವನ್ನು ಅತೀ ಶೀಘ್ರದಲ್ಲಿಯೇ ಬಳಸಿಕೊಂಡು ತುಮಕೂರು ನಗರದಲ್ಲಿಯೇ ನಿರ್ಮಾಣ ಮಾಡಲು ಸದಸ್ಯರುಗಳು ಸಭೆಯಲ್ಲಿ ನಿರ್ಣಯಿಸಿದರು.<br>ಆದರೂ ಸಹ ಮತ್ತೊಮ್ಮೆ ಮಾನ್ಯ ಕುಲಪತಿಗಳು ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ಹಿಂದುಳಿದ ವರ್ಗದ ಮಹಿಳಾ ವಸತಿ ನಿಲಯವನ್ನು ನಿರ್ಮಿಸುವುದು ಸೂಕ್ತವೆಂದು ಸಭೆಗೆ ಮನವರಿಕೆ ಮಾಡಿದರು.<br>ಕೊನೆಗೆ ಎಲ್ಲಾ ಸದಸ್ಯರುಗಳು ತುಮಕೂರು ನಗರದಲ್ಲಿಯೇ ನಿರ್ಮಾಣ ಮಾಡಲು ಸರ್ವಾನುಮತದಿಂದ ತೀರ್ಮಾನಿಸಿದರು. |
| 13 | 2020-21.ಸಾ.ಸಿಂ.07<br>ಸಾ&ಅ.03 | ಸ್ನಾತಕ ಪದವಿ (Paying) ಪುರುಷ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ 2019ರ ಜುಲೈ ಮಾಹೆಯ ಭೋಜನ ಮತ್ತು ಇತರೆ ವೆಚ್ಚಗಳಿಗಾಗಿ ವೆಚ್ಚವಾದ ಹಣ ಮಂಜೂರಾತಿಯ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಸ್ನಾತಕ ಪದವಿ ವಿದ್ಯಾರ್ಥಿನಿಲಯದ 2019ರ ಜುಲೈ ಮಾಹೆಯ ಭೋಜನ ಮತ್ತು ಇತರೆ ವೆಚ್ಚಗಳಿಗಾಗಿ ವೆಚ್ಚವಾದ ಹಣ ರೂ.2,14,146.00 ಗಳನ್ನು ನಿಲಯಪಾಲಕರಿಗೆ ಪಾವತಿಸಲು ಸಭೆಯು ಅನುಮತಿಸಿತು. |
| 14 | 2020-21.ಸಾ.ಸಿಂ.07<br>ಸಾ&ಅ.04 | ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಜನವರಿ-2021 ರಿಂದ ಏಪ್ರಿಲ್-2021ರ ಮಾಹೆಗಳಲ್ಲಿ ವೆಚ್ಚವಾದ ಭೋಜನಾ ಮತ್ತು ಇತರೆ ವೆಚ್ಚಗಳನ್ನು ಡಿ.ಸಿ. ಹುಂಡಿಯ ಮೂಲಕ ಪಾವತಿಸಿರುವುದನ್ನು ಸ್ಥಿರೀಕರಿಸುವ ಬಗ್ಗೆ. | ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಜನವರಿ-2021 ರಿಂದ ಏಪ್ರಿಲ್-2021ರ ಮಾಹೆಗಳಲ್ಲಿ ವೆಚ್ಚವಾದ ಭೋಜನಾ ಮತ್ತು ಇತರೆ ವೆಚ್ಚಗಳನ್ನು ಡಿ.ಸಿ. ಹುಂಡಿಯ ಮೂಲಕ ಪಾವತಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| | | **ಖರೀದಿ ಕೋಶ** | |
| 15 | 2020-21.ಸಾ.ಸಿಂ.07<br>ಖ.ಕೋ.01 | ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಹಳೆಯ ಉತ್ತರ ಪತ್ರಿಕಗಳು ಹಾಗೂ ಇತರೆ ಅನುಪಯುಕ್ತ ಕಾಗದ ಪತ್ರಗಳ ವಿಲೇವಾರಿ ಸಂಬಂಧ ಕೈಗೊಳ್ಳಲಾದ ಟೆಂಡರ್ ಪ್ರಕ್ರಿಯೆಯನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಪರೀಕ್ಷಾ ವಿಭಾಗದ ಹಳೆಯ ಉತ್ತರ ಪತ್ರಿಕಗಳು ಹಾಗೂ ಇತರೆ ಅನುಪಯುಕ್ತ ಕಾಗದ ಪತ್ರಗಳ ವಿಲೇವಾರಿ ಸಂಬಂಧ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಟೆಂಡರ್ ಪ್ರಕ್ರಿಯೆಯ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |

| | | | |
|---|---|---|---|
| 16 | 2020–21.ಸಾ.ಸಿಂ.07 ಖ.ಕೋ.02 | ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಪರೀಕ್ಷಾ ಕಾರ್ಯಗಳಿಗೆ, ಶೈಕ್ಷಣಿಕ ಮತ್ತು ಇತರೆ ಕಾರ್ಯಚಟುವಟಿಕೆಗಳಿಗಾಗಿ ಅಲ್ಪಾವಧಿ ಟೆಂಡರ್ ಮುಖಾಂತರ ಬಾಡಿಗೆ ವಾಹನಗಳ ಸೇವೆಯನ್ನು ಪಡೆಯಲು ವಾರ್ಷಿಕ ದರ ಕರಾರು ಒಪ್ಪಂದ ಮಾಡಿಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿ ಸಭೆಯು ಗುರು ಟ್ರಾವೆಲ್ಸ್, ತುಮಕೂರು ಇವರೊಂದಿಗೆ ದಿನಾಂಕ 31.07.2021ರಿಂದ ಅನ್ವಯವಾಗುವಂತೆ ಒಂದು ವರ್ಷದ ಅವಧಿಗೆ ವಾರ್ಷಿಕ ದರ ಕರಾರು ಒಪ್ಪಂದ ಮಾಡಿಕೊಂಡಿರುವ ಕುರಿತು ಸೂಕ್ತ ದಾಖಲೆಗಳನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯವು ನಿಯಮಾನುಸಾರ ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿರುತ್ತದೆ. |
| 17 | 2020–21.ಸಾ.ಸಿಂ.07 ಖ.ಕೋ.03 | ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಿಗೆ ಸರ್ಕಾರಿ ಸ್ವಾಮ್ಯದ ಸಹಕಾರಿ ಸಂಸ್ಥೆಯಾದಂತಹ TAPCMS, ತುಮಕೂರು ನಿಂದ ದಿನಸಿ ಸಾಮಗ್ರಿಗಳನ್ನು ಸರಬರಾಜು ಪಡೆಯುವ ಪ್ರಕ್ರಿಯೆಗೆ ಸಿಂಡಿಕೇಟ್ ಸಭೆಯ ಸ್ಥಿರೀಕರಣ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿ ಸಭೆಯು ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಿಗೆ ಸರ್ಕಾರಿ ಸ್ವಾಮ್ಯದ ಸಹಕಾರಿ ಸಂಸ್ಥೆಯಾದಂತಹ TAPCMS, ತುಮಕೂರುನಿಂದ ದಿನಸಿ ಸಾಮಗ್ರಿಗಳನ್ನು ಸರಬರಾಜು ಪಡೆಯುವ ಕುರಿತು ವಿಶ್ವವಿದ್ಯಾನಿಲಯವು ನಿಯಮಾನುಸಾರ ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿರುತ್ತದೆ. |
| 18 | 2020–21.ಸಾ.ಸಿಂ.07 ಖ.ಕೋ.04 | ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ಅಗತ್ಯವಿರುವ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳ ಖಾಲಿ ಪದವಿ ಪ್ರಮಾಣ ಪತ್ರಗಳಿಗೆ ಮುದ್ರಣ ಮಾಡುವ ಸಂಬಂಧ ಮೆ. ಜೆಮಿನಿ, ಗ್ರಾಫಿಕ್ಸ್ ಪ್ರೈ.ಲಿ., ಬೀದರ್ ಇವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು. | ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಖಾಲಿ ಪದವಿ ಪ್ರಮಾಣ ಪತ್ರಗಳಿಗೆ ಮುದ್ರಣ ಮಾಡುವ ಸಂಬಂಧ ಮೆ. ಜೆಮಿನಿ, ಗ್ರಾಫಿಕ್ಸ್ ಪ್ರೈ.ಲಿ., ಬೀದರ್ ಇವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿರುತ್ತದೆ. |
| | | **ಕಾನೂನು ಕೋಶ** | |
| 19 | 2020–21.ಸಾ.ಸಿಂ.07 ಕಾ.ಕೋ.01 | ವಿಶ್ವವಿದ್ಯಾನಿಲಯದ ಕಾನೂನಾತ್ಮಕ ವಿಷಯಗಳನ್ನು ನಿರ್ವಹಿಸಲು ಮತ್ತು ನ್ಯಾಯಾಲಯದ ಪ್ರಕರಣಗಳಲ್ಲಿ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಲು ವಿಶ್ವವಿದ್ಯಾನಿಲಯದ ವಕೀಲರ ಪಟ್ಟಿಗೆ ಇಬ್ಬರು ವಕೀಲರನ್ನು ಸೇರ್ಪಡೆಗೊಳಿಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಪ್ರಸ್ತುತ ಇರುವ ಹನ್ನೆರಡು ಜನರ ವಕೀಲರ ಪಟ್ಟಿಗೆ ಶ್ರೀ ಮಲ್ಲಿಪವನ್ ಗೌಡ ಮತ್ತು ಶ್ರೀ ಬಿ.ಪಿ. ರಾಜೇಂದ್ರ ಪ್ರಸಾದ್ ಇವರ ಹೆಸರನ್ನು ಸೇರಿಸಲು ಸಭೆಯು ತೀರ್ಮಾನಿಸಿತು. |
| | | **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | |
| 20 | 2020–21.ಸಾ.ಸಿಂ.07 ಸಾ&ಅ.05 | ಪರಿಸರ ಲೆಕ್ಕ ಪರಿಶೋಧನೆ ಪ್ರಸ್ತಾವನೆ ಕುರಿತು. | Research for Resurgence Foundation Nagpur ಇವರು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಪರಿಸರ ಲೆಕ್ಕ ಪರಿಶೋಧನೆ ಸಂಬಂಧ ಸಲ್ಲಿಸಿರುವ |

| | | | |
|---|---|---|---|
| | | | ಪ್ರಸ್ತಾವನೆ ಕುರಿತು ಕೂಲಂಕಷವಾಗಿ ಚರ್ಚಿಸಿದ ಸಭೆಯು ಈಗಾಗಲೇ ಸದರಿ ಸಂಸ್ಥೆಯೊಂದಿಗೆ ದಿನಾಂಕ 26.07.2019 ರಂದು ಮಾಡಿಕೊಂಡಿರುವ ಒಡಂಬಡಿಕೆಯನ್ನು ಪರಿಗಣಿಸಿ ವಿಶ್ವವಿದ್ಯಾನಿಲಯದಲ್ಲಿ ಪರಿಸರ ಲೆಕ್ಕ ಪರಿಶೋಧನೆ ಸಂಬಂಧ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮತಿಸಿತು. |
| 21 | 2020–21.ಸಾ.ಸಿಂ.07 ಸಾ&ಅ.06 | 2020–21ನೇ ಸಾಲಿನ ವಾರ್ಷಿಕ ವರದಿ ಕುರಿತು. | 2020–21ನೇ ಸಾಲಿನ ವಾರ್ಷಿಕ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ಸಿದ್ದಪಡಿಸಿರುವ ವಾರ್ಷಿಕ ವರದಿಯನ್ನು ಅನುಮೋದಿಸಿರುವ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿರುತ್ತದೆ. |
| **ಪಿಹೆಚ್.ಡಿ. ವಿಭಾಗ** | | | |
| 22 | 2020–21.ಸಾ.ಸಿಂ.07 ಪಿಹೆಚ್.ಡಿ. ವಿಭಾಗ–01 | ಪಿಹೆಚ್.ಡಿ. 2017ರ ವಿನಿಯಮ (ರೆಗುಲೇಷನ್ಸ್) ಪರಿಷ್ಕರಿಸುವ ಕುರಿತು. | ಯು.ಜಿ.ಸಿ. ಪಿಹೆಚ್.ಡಿ. 2016ರ ವಿನಿಯಮದ ನಂತರದ ತಿದ್ದುಪಡಿಗಳನ್ವಯ ತುಮಕೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ 2017ರ ವಿನಿಯಮವನ್ನು ತಿದ್ದುಪಡಿ ಮಾಡಿ ಸಲ್ಲಿಸಿರುವುದನ್ನು ಸಭೆಯು ಅನುಮೋದಿಸಿ, UGC 2018 Regulations ನಲ್ಲಿರುವಂತೆ ಕಂಡಿಕೆ 1 ರಿಂದ 2ರ ತನಕ ಸೇರ್ಪಡೆಗೊಳಿಸಿ, ಸದರಿ ವಿನಿಯಮವು 2017–18ನೇ ಸಾಲಿನಿಂದ ಅನ್ವಯವಾಗುವಂತೆ ಕ್ರಮ ಕೈಗೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ** | | | |
| 23 | 2020–21.ಸಾ.ಸಿಂ.07 ಕಾ.ಅ.ಪ. ವಿಭಾಗ–01 | 2021–22ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ, ಸ್ಥಳೀಯ ವಿಚಾರಣಾ ಸಮಿತಿಯ ರಚನೆ ಕುರಿತು. | 2021–22ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ, ಸಂಯೋಜನೆಗೆ ಅರ್ಜಿ ಸಲ್ಲಿಸಿರುವ ಎಲ್ಲಾ ಕಾಲೇಜುಗಳಿಗೆ ಭೇಟಿ ನೀಡಲು ಸಭೆಯು ಅನುಮೋದನೆ ನೀಡಿತು ಹಾಗೂ ಸ್ಥಳೀಯ |

| | | | |
|---|---|---|---|
| | | | ವಿಚಾರಣಾ ಸಮಿತಿಗಳಲ್ಲಿ ಪ್ರತೀ ಸಮಿತಿಗೆ ಸಿಂಡಿಕೇಟ್ ಸದಸ್ಯರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. ಸ್ಥಳೀಯ ವಿಚಾರಣಾ ಸಮಿತಿಯ ಸದಸ್ಯರುಗಳ ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ಸಿಂಡಿಕೇಟ್ ಸಭೆಯು ನೀಡಿತು. |
| | | **ಪರೀಕ್ಷಾ ವಿಭಾಗ** | |
| 24 | 2020-21.ಸಾ.ಸಿಂ.07 ಪ.ವಿ.-03 | 2021ರ ಮಾರ್ಚ್/ಏಪ್ರಿಲ್/ಆಗಸ್ಟ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಹಾಗೂ ಸ್ನಾತಕ ಶಿಕ್ಷಣ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಬಾಡಿಗೆಗೆ ಪಡೆಯಲಾಗಿರುವ ವಾಹನಗಳ ಬಾಡಿಗೆಯ ಮೊತ್ತ ಪಾವತಿಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು 2021ರ ಮಾರ್ಚ್/ಏಪ್ರಿಲ್/ಆಗಸ್ಟ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಹಾಗೂ ಸ್ನಾತಕ ಶಿಕ್ಷಣ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಮೆ. ಗುರು ಟ್ರಾವೆಲ್ಸ್, ತುಮಕೂರು ಇವರಿಂದ ಬಾಡಿಗೆಗೆ ಪಡೆದಿರುವ ವಾಹನಗಳ ಬಾಡಿಗೆ ಮೊತ್ತ ರೂ.3,76,555.00 ಗಳನ್ನು ಸದರಿಯವರಿಗೆ ಪಾವತಿಸಲು ಸಭೆಯು ಅನುಮೋದಿಸಿತು. |
| 25 | 2020-21.ಸಾ.ಸಿಂ.07 ಪ.ವಿ.-04 | Sri N Sathya Prakash ಇವರಿಗೆ ತಾತ್ಕಾಲಿಕ ಡಿ.ಲಿಟ್ ಪದವಿ ಘೋಷಿಸಿ ಅಧಿಸೂಚನೆ ಹೊರಡಿಸಿರುವ ಕುರಿತು. | Sri N Sathya Prakash ಇವರಿಗೆ ತಾತ್ಕಾಲಿಕ ಡಿ.ಲಿಟ್ ಪದವಿ ಘೋಷಿಸಿ ದಿನಾಂಕ 12.08.2021ರಂದು ಅಧಿಸೂಚನೆ ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿರುತ್ತದೆ. |
| | | **ಇಂಜಿನಿಯರಿಂಗ್ ವಿಭಾಗ** | |
| 26 | 2020-21.ಸಾ.ಸಿಂ.07 ಇಂ.ವಿ.01 | ತುಮಕೂರು ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನ ಮುಂಭಾಗ ಹಾಗೂ ವಿಜ್ಞಾನ ಕಾಲೇಜಿನ ಆಟದ ಮೈದಾನದಲ್ಲಿ ಕೊರೆದಿರುವ ಕೊಳವೆಬಾವಿಗಳಿಗೆ ಪಂಪ್‌ಸೆಟ್, ಕೇಬಲ್ ಹಾಗೂ ಸಂಬಂಧಿಸಿದ ಐಟಂಗಳನ್ನು ಖರೀದಿಸಿ ಅಳವಡಿಸುವ ಟೆಂಡರ್ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದಲ್ಲಿ ಕೊರೆಸಿರುವ ಕೊಳವೆಬಾವಿಗಳಿಗೆ ಪಂಪ್‌ಸೆಟ್, ಕೇಬಲ್ ಹಾಗೂ ಸಂಬಂಧಿಸಿದ ಐಟಂಗಳನ್ನು ಖರೀದಿಸಿ ಅಳವಡಿಸುವ ಸಂಬಂಧ ಬಿಡ್‌ನಲ್ಲಿ ಭಾಗವಹಿಸಿ ಕಡಿಮೆ ದರ ನಮೂದಿಸಿರುವ ಕಿರಣ್ ಪಿ.ಆರ್ (ವಜ್ರಕಾಯ ಎಂಟರ್ ಪ್ರೈಸಸ್) ಇವರಿಗೆ ಟೆಂಡರ್ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 27 | 2020-21.ಸಾ.ಸಿಂ.07 ಇಂ.ವಿ.02 | ತುಮಕೂರು ವಿಶ್ವವಿದ್ಯಾನಿಲಯದ ಹಾಲಿ ಇರುವ ಕ್ಯಾಂಪಸ್‌ನಲ್ಲಿ ಆಡಳಿತ ಕಛೇರಿಯನ್ನು ನವೀಕರಿಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ತುಮಕೂರು ವಿಶ್ವವಿದ್ಯಾನಿಲಯದ ಹಾಲಿ ಇರುವ ಕ್ಯಾಂಪಸ್‌ನಲ್ಲಿ ಆಡಳಿತ ಕಛೇರಿಯನ್ನು ನವೀಕರಿಸಲು |

| | | | | |
|---|---|---|---|---|
| | | | | ಸ್ವೀಕೃತವಾಗಿರುವ ನೀಲಿ ನಕ್ಷೆಯಂತೆ ಹಾಗೂ 2021-22ನೇ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಲ್ಲಿ ಅಂದಾಜು ಮೊತ್ತ ರೂ. 280.00 (ಎರಡುನೂರ ಎಂಬತ್ತು ಲಕ್ಷಗಳು ಮಾತ್ರ) ಗಳೊಂದಿಗೆ ಕಾಮಗಾರಿ ಕೈಗೊಳ್ಳಲು ಸರ್ವಾನುಮತದಿಂದ ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| 28 | 2020-21.ಸಾ.ಸಿಂ.07 ಇಂ.ವಿ.03 | ತುಮಕೂರು ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ಅಲ್ಪಸಂಖ್ಯಾತರ ಸ್ನಾತಕೋತ್ತರ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕಾಗಿ ನಿವೇಶನವನ್ನು ನೀಡುವ ಬಗ್ಗೆ. | | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ತುಮಕೂರು ನಗರದ ಜಯನಗರದಲ್ಲಿರುವ ವಿಶ್ವವಿದ್ಯಾನಿಲಯಕ್ಕೆ ಸೇರಿರುವ ನಿವೇಶನದಲ್ಲಿ ಅಲ್ಪಸಂಖ್ಯಾತರ ಸ್ನಾತಕೋತ್ತರ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ನಿರ್ಮಾಣ ಮಾಡಲು ಸಭೆಯು ತೀರ್ಮಾನಿಸಿತು. |
| 29 | 2020-21.ಸಾ.ಸಿಂ.07 ಇಂ.ವಿ.04 | ತುಮಕೂರು ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ನಿರ್ಮಿಸಲಾಗುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ 3 ವಿದ್ಯಾರ್ಥಿನಿಲಯ ಹಾಗೂ ಮುಖ್ಯದ್ವಾರದ ಕಾಮಗಾರಿಗಳ ಬಾಕಿ ಮೊತ್ತವನ್ನು ಮೆ. ರೈಟ್ಸ್ ಸಂಸ್ಥೆಗೆ ಪಾವತಿಸುವ ಬಗ್ಗೆ. | | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಮೆ. ರೈಟ್ಸ್ ಸಂಸ್ಥೆಗೆ ಬಾಕಿ ಇರುವ ಮೊತ್ತ ರೂ. 6,84,47,742.00 (ಆರು ಕೋಟಿ ಎಂಬತ್ನಾಲ್ಕು ಲಕ್ಷದ ನಲವತ್ತೇಳು ಸಾವಿರದ ಏಳುನೂರ ನಲವತ್ತೆರಡು ರೂಪಾಯಿಗಳು ಮಾತ್ರ)ಗಳ ಪಾವತಿ ಸಂಬಂಧ ಸದರಿ ರೈಟ್ಸ್ ಸಂಸ್ಥೆಯವರು ಸಲ್ಲಿಸಿರುವ ಪೂರಕ ದಾಖಲೆಗಳನ್ನು ಪರಿಶೀಲಿಸಿದ ಸಭೆಯು ಬಾಕಿ ಇರುವ ಸದರಿ ಮೊತ್ತವನ್ನು ಮೇ. ರೈಟ್ಸ್ ಸಂಸ್ಥೆಗೆ ಪಾವತಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| | | ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ | | |
| 30 | 2020-21.ಸಾ.ಸಿಂ.07 ಸಾ&ಅ.07 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ "ನೊಳಂಬ ಸಂಸ್ಕೃತಿ ಅಧ್ಯಯನ ಪೀಠ" ವನ್ನು ಸ್ಥಾಪಿಸುವಂತೆ ಮನವಿ ಕುರಿತು. | | ತುಮಕೂರು ವಿಶ್ವವಿದ್ಯಾನಿಲಯದಲ್ಲಿ "ನೊಳಂಬ ಸಂಸ್ಕೃತಿ ಅಧ್ಯಯನ ಪೀಠ" ವನ್ನು ಸ್ಥಾಪಿಸುವ ಸಂಬಂಧವಾಗಿ ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್. ರವರು ಸಲ್ಲಿಸಿರುವ ಮನವಿಯ ಕುರಿತು, "ನೊಳಂಬ ಸಂಸ್ಕೃತಿ" ಬಗ್ಗೆ ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಸುನಿಲ್ ಪ್ರಸಾದ್ ಟಿ.ಎಸ್. ರವರು ಸಭೆಗೆ ಪರಿಚಯಿಸಿದರು ಹಾಗೂ ಸದರಿ ಅಧ್ಯಯನ ಪೀಠವನ್ನು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸುವುದರಿಂದ ತುಮಕೂರಿನ ಇತಿಹಾಸಕ್ಕೆ ಸಂಬಂಧಿಸಿದ ನೊಳಂಬ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಸಂಶೋಧನೆಗಳು ನಡೆಯಲು ಅನುಕೂಲವಾಗುತ್ತದೆ. |

| | | | |
|---|---|---|---|
| | | | ಮುಂದುವರೆದು, ಸದರಿ ಪೀಠಕ್ಕೆ ಅನುದಾನವು ಹಂತ ಹಂತವಾಗಿ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗುವುದಾಗಿ ಸಭೆಗೆ ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದಲ್ಲಿ ನೊಳಂಬ ಸಂಸ್ಕೃತಿ ಅಧ್ಯಯನ ಪೀಠವನ್ನು ಸ್ಥಾಪಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಒಮ್ಮತದಿಂದ ತೀರ್ಮಾನಿಸಿತು. ಮುಂದುವರೆದು, ಇಂದಿನಿಂದ ಜಾರಿಗೆ ಬರುವಂತೆ "ನೊಳಂಬ ಸಂಸ್ಕೃತಿ ಅಧ್ಯಯನ ಪೀಠ" ವನ್ನು ಪ್ರಾರಂಭಿಸಲು ಹಾಗೂ ಪೀಠದ ಪ್ರತ್ಯೇಕ ಖಾತೆಯನ್ನು ತೆರೆದು ವಿಶ್ವವಿದ್ಯಾನಿಲಯಕ್ಕೆ ಬಂದಿರುವ ಹಣವನ್ನು ಜಮೆ ಮಾಡಲು ಸಭೆಯು ತೀಮಾನಿಸಿತು. "ನೊಳಂಬ ಸಂಸ್ಕೃತಿ ಅಧ್ಯಯನ ಪೀಠ" ಕ್ಕೆ ಪರಿನಿಯಮಾವಳಿಯನ್ನು ರಚಿಸಲು ಕೂಡಲೇ ಸಮಿತಿಯನ್ನು ಹಾಗೂ ಸದರಿ ಪೀಠಕ್ಕೆ ನಿರ್ದೇಶಕರನ್ನು ನೇಮಿಸಲು ಸಭೆಯು ಸರ್ವಾನುಮತದಿಂದ ನಿರ್ಣಯ ಕೈಗೊಂಡಿತು. |
| **ಸಿಬ್ಬಂದಿ ವಿಭಾಗ** | | | |
| 31 | 2020–21.ಸಾ.ಸಿಂ.07 ಸಿ.ವಿ.05 | Statues framed under section 40 (O) of Karnataka State Universities Act-2000 regarding absorption of opted in Teaching and Non-Teaching Staff of erstwhile Government Science College, Tumkur and Government Arts College, Tumkur, into Tumkur University service ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಈ ಪರಿನಿಯಮದ ಕುರಿತು ನ್ಯಾಯಾಲಯದಿಂದ ಅಂತಿಮ ಆದೇಶ ಬರುವವರೆಗೂ ಸದರಿ ಪರಿನಿಯಮವನ್ನು ಸ್ಥಗಿತಗೊಳಿಸುವಂತೆ (Pending) ಸಭೆಯು ತೀರ್ಮಾನಿಸಿತು ಹಾಗೂ ಈ ಮಾಹಿತಿಯನ್ನು ಸರ್ಕಾರಕ್ಕೆ ತಿಳಿಸಲು ಸಭೆಯ ಎಲ್ಲಾ ಸದಸ್ಯರುಗಳು ತೀರ್ಮಾನಿಸಿದರು. |
| **ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ** | | | |
| 32 | 2020–21.ಸಾ.ಸಿಂ.07 ಕಾ.ಅ.ಪ. ವಿಭಾಗ–02 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ) ಗುಬ್ಬಿ, ಸ್ವಾಯತ್ತರ ಕಾಲೇಜಿನ 2018–19 ಮತ್ತು 2019–20ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ತಪಾಸಣಾ ಮತ್ತು ಮೌಲ್ಯಮಾಪನ ಆಂತರಿಕ ಸಮಿತಿಯು ವರದಿಯನ್ನು ಸಲ್ಲಿಸಿರುವ ಕುರಿತು. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ) ಗುಬ್ಬಿ, ಸ್ವಾಯತ್ತರ ಕಾಲೇಜಿನ 2018–19 ಮತ್ತು 2019–20ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ತಪಾಸಣಾ ಮತ್ತು ಮೌಲ್ಯಮಾಪನ ಆಂತರಿಕ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಭೆಯು ಅಂಗೀಕರಿಸಿತು. |

## ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಿದ ಇತರೆ ವಿಷಯಗಳು

| ಕ್ರ.ಸಂ. | ವಿಷಯ | ನಿರ್ಣಯ |
|---|---|---|
| 1 | ಎಲ್ಲಾ ಸ್ನಾತಕ ಪದವಿ ಕೋರ್ಸ್‌ಗಳ ಪ್ರವೇಶಾತಿ ಶುಲ್ಕದಲ್ಲಿ ವಿನಾಯಿತಿ ನೀಡುವ ಕುರಿತು | ಶ್ರೀ ರಾಜು, ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಮನವಿಯ ಕುರಿತು, ಚರ್ಚಿಸಿದ ಸಭೆಯು ಕೋವಿಡ್-19ರ ಸಾಂಕ್ರಾಮಿಕ ರೋಗದಿಂದ ನಿಧನ ಹೊಂದಿರುವಂತಹ ಪೋಷಕರ ಮಕ್ಕಳಿಗೆ 2021-22ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ಪ್ರವೇಶಾತಿಯಲ್ಲಿ ಶುಲ್ಕ ವಿನಾಯಿತಿ ನೀಡುವಂತೆ ಸಭೆಯು ತೀರ್ಮಾನಿಸಿತು. |
| 2 | ವಿಶ್ವವಿದ್ಯಾನಿಲಯಕ್ಕೆ ಸೇರಿದ ಸ್ವತ್ತುಗಳ ಕುರಿತು | ಶ್ರೀ ಪ್ರಸನ್ನಕುಮಾರ್ ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಮನವಿಯ ಕುರಿತು, ಚರ್ಚಿಸಿದ ಸಭೆಯು ಈ ಕುರಿತು ಕ್ರಮ ಕೈಗೊಳ್ಳಲು ಕುಲಸಚಿವರ ಅಧ್ಯಕ್ಷತೆಯಲ್ಲಿ ಶ್ರೀ ಪ್ರಸನ್ನಕುಮಾರ್, ಶ್ರೀ ಟಿ.ಡಿ. ವಿನಯ್, ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್., ಶ್ರೀ ಶ್ರೀನಿವಾಸ್ ಆರ್.ಕೆ. ಮತ್ತು ಶ್ರೀ ರಾಜು, ಇವರನ್ನೊಳಗೊಂಡಂತೆ ಸಮಿತಿಯನ್ನು ರಚಿಸಿ, ಮುಂದಿನ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| 3 | Double the duration ಅವಧಿ ಮುಗಿದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಇದೊಂದು ಬಾರಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡುವಂತೆ ಹಾಗೂ ಒಮ್ಮೆ ಅವಕಾಶ ಪಡೆದ ವಿದ್ಯಾರ್ಥಿಗಳು ಪುನಃ ಪರೀಕ್ಷೆ ತೆಗೆದುಕೊಳ್ಳಲು ಸಲ್ಲಿಸುವ ಮನವಿಯನ್ನು ಪರಿಗಣಿಸದೇ ಇರಲು ಸಭೆಯು ಒಮ್ಮತದಿಂದ ತೀರ್ಮಾನಿಸಿತು. |
| 4 | 'ಡಿ' ಗ್ರೂಪ್ ನೌಕರರನ್ನು One time measure ಅಡಿಯಲ್ಲಿ ಖಾಯಂ ಗೊಳಿಸುವ ಕುರಿತು. | ಶ್ರೀ ಟಿ.ಡಿ. ವಿನಯ್, ಸಿಂಡಿಕೇಟ್ ಸದಸ್ಯರು ರವರು ಪ್ರಸ್ತಾಪಿಸಿರುವ ವಿಷಯದ ಕುರಿತು, ಕೂಲಂಕಷವಾಗಿ ಪರಿಶೀಲಿಸಿ ನಂತರದಲ್ಲಿ ಸಮಿತಿ ರಚನೆಗೆ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |

| | | | |
|---|---|---|---|
| ಶ್ರೀ ಶ್ರೀನಿವಾಸ ಆರ್.ಕೆ. | [signature] | ಪ್ರೊ. ಹೆಚ್.ಎಸ್ ಶಿವಯೋಗಿ | [signature] |
| ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್. | [signature] | ಡಾ. ಕೆ ಸಿ ಜಯಸ್ವಾಮಿ | [signature] |
| ಶ್ರೀ ಪ್ರಸನ್ನಕುಮಾರ್ | [signature] | ಪ್ರೊ. ಪರಮಶಿವಮೂರ್ತಿ ಡಿ.ವಿ | [signature] |
| ಶ್ರೀ ಟಿ.ಡಿ. ವಿನಯ್ | [signature] | ಪ್ರೊ. ಎಲ್.ಪಿ ರಾಜು | [signature] |
| ಶ್ರೀ ರಾಜು | [signature] | ಕುಲಸಚಿವರು (ಪರೀಕ್ಷಾಂಗ) | [signature] |
| ಶ್ರೀಮತಿ ಲತಾ ಬಿ.ಎಸ್ | [signature] | ಹಣಕಾಸು ಅಧಿಕಾರಿಗಳು | [signature] |
| ಡಾ. ಟಿ. ವೆಂಕಟಾಚಲಯ್ಯ | [signature] | — | — |

[signature]
ಕುಲಸಚಿವರು

[signature]
ಮಾನ್ಯ ಕುಲಪತಿಗಳು